ಊರು ಅಲೆತಿದ್ನಡ; ಬಸ್ಸಿಗೆ ಆದಷ್ಟು ಲಗೂನೆ ಕರ್ಕಂಡು ಬಾ" ಎಂದಳು. ಅನಂತ ಅವಳ ದೀನ ಯಾಚನೆಗೆ, "ಅಡ್ಡಿಲ್ಲೆ ಅಡ್ಡಿಲ್ಲೆ" ಎಂದ. ಪಾಚಣ್ಣ ಸಾಧು ಪ್ರಾಣಿಯಂತೆ ಕಂಡ; ಸಾತ್ವಿಕ ಅಕ್ಕುವನ್ನು ಗಯ್ಯಾಳಿಯಾಗಿಸಿಕೊಂಡು ಪಳಗಿ ಹೋಗಿದ್ದ. ಸೀರೆಯಲ್ಲಿ ಅಡಗಿದ ಒಂದೆರೆಡು ಸೌಳಿಗಳು ಅವಳ ರಹಸ್ಯ ಜಾಗಗಳಿಗೆ ಕಚ್ಚಿ ಅವುಗಳನ್ನು ಹೊರಗಿನಿಂದಲೆ ಹಿಸುಕಲು ನಾಚಿ ನರ್ತಿಸತೊಡಗಿದಳು. ಆ ನಾಟ್ಯದ ಅಸ್ತವ್ಯಸ್ತ ಭಂಗಿಯಲ್ಲಿ ತೊಡೆ ಕಣಿವೆಯೊಳಗೆ ಸೀರೆ ಸಿಕ್ಕಿದ್ದು ಅವಳ ಅರಿವಿಗೆ ಬಾರದೆ ಅನಂತನಿಗೆ ಕಸಿವಿಸಿಯಾಯಿತು. ಹೈಸ್ಕೂಲಿನ ತನ್ನ ಸಹಪಾಠಿ ಹೆಣ್ಣುಮಕ್ಕಳು ಕ್ಲಾಸಿನಲ್ಲಿ ಟೀಚರ ಪ್ರಶ್ನೆಗೆ ಉತ್ತರಿಸುತ್ತಿದ್ದಾಗ ಬಲಗೈಯನ್ನು ಮೇಲೆತ್ತಿ ಬಳೆಯ ಮುದ್ದು ಎಡಗೈಯನ್ನು ಚೆಂದಕೆ ಮರೆಯದೆ ಡೆಸ್ಕಿನಿಂದ ಎದ್ದೇಳುವಾಗ ಸೊಂಟದ ಕೆಳಗಿನ ಹಿಂಭಾಗದ ಸ್ಕರ್ಟಿನ ಪ್ಲೇಟುಗಳು ಒಳ ತೂರದಂತೆ ಸವರಿ ಎಚ್ಚರವಹಿಸುತ್ತಿದ್ದದ್ದು ನೆನಪಾಯಿತು. "ಆಯಿ ಪಲ್ಕಾ ಹೊಲ್ದಿಟ್ಟಿದ್ದೆ. ಎರಡು ಗುಂಡಿಗೆ ಕಾಜು ಮಾಡಿ ಕೊಡ್ತೆ, ತಡಿ" ಅಕ್ಕು ಜಗಲಿಯ ಮೂಲೆಯ ನಿಚ್ಚಣಿಕೆಯನ್ನು ಏರಿ ಹೊರ ಮೆತ್ತಿನ ಮೇಲೆ ಹೊಲಿಗೆ ಯಂತ್ರವನ್ನು ಗಡಗಡ ಸದ್ದು ಮಾಡಿದಳು.

ಅಕ್ಕುನ ತವರೂರು ಕುಮಟೆಯ ಪಂಡಿತ ಮಾಸ್ತರ ಮನೆಯಲ್ಲಿ ಮೂರು ವರ್ಷದ ಕಾಲೇಜಿನ ಅನ್ನದ ಋಣಶೇಷ ಅನಂತನಿಂದ ತೀರಿಸಲಾಗಿರಲಿಲ್ಲ. ಪಂಡಿತರ ಉದಾರ ಪ್ರೋತ್ಸಾಹವಿಲ್ಲದಿದ್ದರೆ ತಾನು ಓದಿ ಊರಿನ ಹೈಸ್ಕೂಲಿನಲ್ಲಿ ಮಾಸ್ತರಿಕೆ ಮಾಡುವ ಮಟ್ಟಕ್ಕೆ ಏರಲು ಸಾಧ್ಯವಿರಲಿಲ್ಲ ಎಂದು ಅವನ ಅಂತರಂಗಕ್ಕೆ ಗೊತ್ತು. ಪಂಡಿತರದ್ದು ಸರಕಾರದಿಂದ ನೇಮಕವಾದ ನೌಕರಿಯಾಗಿರಲಿಲ್ಲ; ಯಲ್ಲಾಪುರ ತಾಲ್ಲೂಕಿನ ಹಲವು ಹಳ್ಳಿಗಳಿಗೆ ಅವರು ಪರಿಚಿತರು; ಯಾವುದಾದರೂ ಕನ್ನಡ ಶಾಲೆಗೆ 'ಹ್ಯಾಂಡ್' ಕೊರತೆಯಾದರೆ ಅವರು ಹಾಜರು; ಪಗಾರಿಗೆ ಅವರು ಎಂದೂ ತಲೆಕೆಡಿಸಿಕೊಂಡವರಲ್ಲ; ಊರವರ ಒಂದಿಷ್ಟು ವಂತಿಗೆ ಅವರ ಓಡಾಟದ ಖರ್ಚಿಗೆ ಮತ್ತು ಮೂವತ್ತು ಮಾರ್ಕಿನ ಬೀಡಿಗೆ ಸಾಲುತ್ತಿತ್ತು; ಬೀಡಿ ಕೊಟ್ಟೆಯನ್ನು ಹರಿಯುವ ಮುನ್ನ ಎರಡೂ ಅಂಗೈಗಳ ನಡುವೆ ಇಟ್ಟು ಸಡಲಿಕೆಗೆ ನಾಜೂಕಾಗಿ ಉಜ್ಜುತ್ತಿದ್ದಾಗ ಉಂಟಾಗುತ್ತಿದ್ದ ನವಿರಾದ ಸರಬರ ಸದ್ದು, ಚಾವಿ ಚಿತ್ರದ ಬೆಂಕಿ ಪೊಟ್ಟಣದಿಂದ ಮದ್ದಿನ ಕಡ್ಡಿ ತೆಗೆದು ಛಕ್ಕನೆ ಕೆರೆದು ಬುರ್ರ್‌ಗೊಳಿಸುವ ಶೈಲಿ, ಮೊದಲ ಧಮ್ಮಿನ ಹೊಗೆಯ ಆಹ್ಲಾದಕರ ಪರಿಮಳ ಅನಂತನ ನೆನಪಿನ ಜನ್ಮಕ್ಕಂಟಿವೆ. ಉಳಿದಂತೆ ಊಟ–ಆಸ್ರಿ–ವಸತಿ ಕರೆದವರ ಮನೆಯಲ್ಲಿ; ಹೆಚ್ಚು ಓದಿದ್ದು ಹೌದು; ಕಲಿಸುವಾಣಿಕೆ ಭಾರಿ ಚಲೊ; ಸರಕ್ಕನೆ ಸಿಟ್ಟಿನಿಂದ ರೂಲ್‌ಕಟ್ಟಿಗೆಯಿಂದ ಹೊಡೆಯೋದು ಜಾಸ್ತಿ; ಆದರೆ ಆಗಾಗ ತಲೆ ಕೆಡುತ್ತಿತ್ತು; ಅದೇ ಸ್ವಲ್ಪ ಐಬು; ತಲೆ ಕೆಟ್ಟಾಗ ಎಲ್ಲೇ ಆಗಲಿ ಯಕ್ಷಗಾನದ ಪದ್ಯ ಕಿವಿಗೆ ಬಿದ್ದರೆ ಮುಗಿಯಿತು. ಅದು ಬಸ್‌ಸ್ಟ್ಯಾಂಡಿನಂಥ ಸಾರ್ವಜನಿಕ ಜಾಗವೇ ಆಗಿರಲಿ, ಸುತ್ತಲಿದ್ದವರನ್ನು ಪ್ರೇಕ್ಷಕರನ್ನಾಗಿಸಿಕೊಂಡು ಅದೊಂದು ಅರ್ಧಚಂದ್ರಾಕಾರದ ಸ್ಟೇಜ್ ಎಂಬಂತೆ ಹಾವಭಾವದೊಂದಿಗೆ ಸೊಂಟ ತಗ್ಗಿಸಿ ಕುಣಿಯಲು ಆರಂಭಿಸುತ್ತಿದ್ದರು. ಸಂಬಳ ಕಡಿಮೆಯಾದ್ದರಿಂದ, ತಲೆ ಸರಿ ಇರದಿರುವದರಿಂದ ಅವರ ಗೌರವಕ್ಕೆ ಚ್ಯುತಿ ಬಂದಿರಲಿಲ್ಲ; ಊರಲ್ಲಿ ಅವರನ್ನು ಸದರಾಗಿ ನೋಡುತ್ತಿದ್ದರಿಂದ ಸೂಟಿಯಲ್ಲೂ ಅವರು ಘಟ್ಟವಿಳಿಯದೆ ಇತ್ತ ತಿಥಿ, ಮದುವೆ, ಆಲೆಮನೆ, ನಾಟಕ ಎಂದು ಇರುತ್ತಿದ್ದರು; ಬಂದಾಗ ಊರ ಅವರ ಮನೆಯಲ್ಲಿ ವಿಚಿತ್ರ ಚಂಚಲ ಉದ್ವಿಗ್ನತೆಯಿಂದ ಚಡಪಡಿಸುತ್ತಿದ್ದರು; ಅವರ ಹಗುರಾದ ತಾತ್ಕಾಲಿಕ ತೇಲು ಹುಚ್ಚಿನ ಹಿಂದೆ ಹೆಂಡತಿಯ ನಡತೆಯೊ ಮನೆಯ ಬಡತನವೊ ನೌಕರಿ ಕಾಯಂ ಆಗದಿರುವುದಕ್ಕೊ ಏನೊ ಇರಬೇಕೆಂದು ಕನಿಕರದಿಂದ ಕಾಣುತ್ತಿದ್ದರು. ಆಗೆಲ್ಲ ಗುರುಭಕ್ತಿ ಉಕ್ಕಿ ಅದೆಲ್ಲ ಸುಳ್ಳು ವದಂತಿ ಎಂದು ಅನಂತ ತಳ್ಳಿ ಹಾಕುತ್ತಿದ್ದ.

ಮಾಸ್ತರು ಕಾಲೇಜಿನ ವಿದ್ಯಾಭ್ಯಾಸಕ್ಕೆ ಅನಂತ ಮೂರು ವರ್ಷ ನಮ್ಮ ಮನೆಯಲ್ಲಿರುತ್ತಾನೆಂದಾಗ ಸಲೀಲತ್ತೆ ಒಪ್ಪತ್ತಿನ ಕೂಳಿಗೆ ಗತಿಯಿಲ್ಲದ ಕಷ್ಟ ಕಾಲದಲ್ಲಿ ಮತ್ತೊಬ್ಬನ ಹೊಟ್ಟೆ ಹೊರೆಯುವುದು